ಕಥೆ

ಸಂಕೇಶ್ವರ ಮೆಲ್ಲಗೆ ಆತನಿಗೆ ವಸ್ತುಸ್ಥಿತಿಯ ಮನವರಿಕೆ ಮಾಡಿದರು. ಒಮ್ಮೊಮ್ಮೆ ವಾಸ್ತವ ಬಹು ಕಹಿ ಆಗಿರುತ್ತದೆ ಮತ್ತು ನಮ್ಮರಿವಿಗೆ ಬರದಂತೆ ಮಿಂಚಿನ ವೇಗದಲ್ಲಿ ಬರಸಿಡಿಲೆರಗಿದಂತೆ ಆಕಸ್ಮಿಕವಾಗಿ ಎರಗಿಯೂ ಬಿಡುತ್ತದೆ. ಆ ಸಿಡಿಲಿಗೆ ಕುಟುಂಬವೇ ಸುಟ್ಟು ಭಸ್ಮಗೊಳ್ಳುತ್ತದೆ. ಇಂದು ತನ್ನ ಕುಟುಂಬಕ್ಕೆ ಅಂಥ ಘನಘೋರ ಸಂಕಷ್ಟ ಎದುರಾಗಿದೆ. ತಣ್ಣಗೆ ಸಾಗುವ ತನ್ನ ಬದುಕಿನ ಮಾರ್ಗದಲ್ಲಿ ಹೀಗೆ ಆಘಾತ ನೀಡೋ ಬೆಟ್ಟವೇ ಕುಸಿಯೋ ದಿನಗಳು ಬರುತ್ತವೆಂದು ರಾಮಗೊಂಡ ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ.

ರಾಮಗೊಂಡ ತನ್ನಷ್ಟಕ್ಕೆ ತಾನು ಧೈರ್ಯ ತಂದು ಸಾವರಿಸಿಕೊಂಡ ಮತ್ತು ಕೇಳಿದ,

'ಸರ್... ಮತ್ತ ಆಕೀ ಅವ್ವಗ ಇದನ್ನ ಹೆಂಗ ಹೇಳೋದು?'

'ಈಗ ಏನೂ ಹೇಳಬ್ಯಾಡರಿ... ಸಮಯ ಎಲ್ಲಾ ತಿಳಿಸಿಕೊಡತದ... ಅದರ ಓಘದೊಳಗ ತಿಳಕೋತಾರ' ಅಂದರು.

ರಾಮಗೊಂಡನಿಗೆ ಮಾತೇ ಹೊರಡಲಿಲ್ಲ. ಮೌನಕ್ಕೆ ಶರಣಾದ.

'ಮೊನ್ನೆ, ನಮ್ಮ ಕಜೀನ್ ಪೈಕಿ... ನಿಮ್ಮ ಮಗಳ ವಯಸ್ಸಿನಾಕೀನ... ಅಡ್ಮಿಟ್ ಆದಳು... ಜಾಯಿಂಡಿಸ್... ಮತ್ತ ಅದೂ ಎ ಪ್ರಕಾರ... ಕಮ್ಮಿ ಆಗೋ ರೋಗ... ನಾನ ನೋಡಿಕೊತಿದ್ನಿ...ಮೂರನೇ ದಿನ ಖಲ್ಲಾಸ, ಸತ್ತಳು... ಹಂಗಂತ ಎಲ್ಲರಿಗೂ ಆಗತದ ಅಂತಿಲ್ಲ. ಇಟ್ ಡಿಪೆಂಡ್ಸ್... ಅವರವರ ಪ್ರಕೃತಿ ಮ್ಯಾಲ ಹೋಗತದ...' ಹೀಗೆ ಹೇಳಿ ಡಾಕ್ಟರ್ ಸುಮ್ಮನಾದರು. ತಮ್ಮ ಕುಟುಂಬದ ಬಳಗಕ್ಕೆ ಸಂಬಂಧಿಸಿದ ಜೀವವನ್ನು ಉಳಿಸಿಕೊಳ್ಳಲಾಗಲಿಲ್ಲವೆಂಬ ವಿಷಾದ ಭಾವ ಅವರಲ್ಲಿ ಮಡುಗಟ್ಟಿತ್ತು. ರಾಮಗೊಂಡ ಉಗುಳು ನುಂಗಿದ. ಅರೆಕ್ಷಣ ತನ್ನ ಮಗಳೇ ಸತ್ತಳೇನೋ ಎಂಬ ಭ್ರಾಂತಿಗೊಳಗಾದ. ಮನದೊಳಗೆ ಹುಚ್ಚು ಹಿಡಿಸುವ ಅದೇ ಬಗೆಯ ಆಲೋಚನಾ ಬಿಂಬಗಳು. ಮತ್ತೆ ತನಗೆ ತಾನೇ ಸಾವರಿಸಿ ಚೇತರಿಸಿಕೊಂಡ. ರೂಮಿಗೆ ಹೋದ. ಸವಿತಾ ನಿದ್ದೆಗೆ ಜಾರಿದ್ದಳು. ಆಕೆ ಎದ್ದಾಳೆಂಬ ಎಚ್ಚರಿಕೆಯಿಂದ ಇಬ್ಬರೂ ಹೊರಬಂದರು.

ಸುನೀತಾ, ರಾಮಗೊಂಡನ ಬಾಡಿದ ಮುಖ



ನೋಡಿ ಆತಂಕಗೊಂಡಳು ಮತ್ತು ಕೇಳಿದಳು.

'ಡಾಕ್ಟರ್ ಯಾನಂದರು?'

ಆತನಿಗೆ ತಕ್ಷಣ ಏನು ಹೇಳುವುದು ಹೊಳೆಯಲಿಲ್ಲ.

'ಕಮ್ಮಿ ಆಗಲಿಕ್ಕಿ ಟೈಮ್ ತಗೊಳ್ಳತದ ಅಂದರು'

'ನೀವ ಹಂಗ ಮಾರಿ ಸಪ್ಪಗ ಮಾಡಬ್ಯಾಡರಿ...'

ಆತನಿಗೆ ತಡೆದುಕೊಳ್ಳಲಾಗಲಿಲ್ಲ. ಸಣ್ಣಗೆ ಬಿಕ್ಕಿದ. ದಳದಳನೆ ಕಣ್ಣೀರು ನೆಲಕ್ಕೆ ಬಿತ್ತು. ಅವಳ ಕಣ್ಣಲ್ಲಿ ಸಹ ನೀರು ಹನಿದಿತ್ತು. ಕಣ್ಣಲ್ಲೇ ಮಾತಾಡಿದರು. 'ನಾವು ಅಧೀರರಾಗಬಾರದು!' ಎಂದು.